ಬಾಗಿಲು ಹಾಕಿಕೊಂಡು ಕೋಣೆಗೆ ಬಂದು ಮೇಕಪ್ ಮಾಡಿಕೊಂಡೆ. ಅವ್ವ 'ಓಂ ನಮಃ ಶಿವಾಯ' ಜಪ ಮಾಡುತ್ತ ಮಲಗಿದ್ದಳು. ಮೆಲ್ಲನೆ ಒಳಗಡಿ ಇಟ್ಟು "ಭಕ್ತೆ..." ಎಂದೆ. ಶಿವನನ್ನು ಕಂಡೊಡನೇ ಆನಂದತುಲಂದಿತಳಾಗಿ ಜಪಿಸುತ್ತಿದ್ದ ಎಡಗೈಯನ್ನೇ ಎದೆಗೆ ಮುಟ್ಟಿಕೊಂಡಳು. ನಾನೂ ಆಶೀರ್ವಾದಸ್ವರೂಪ ಕೈ ಎತ್ತಿದೆ. "ನಿನ್ನ ಪಾವನ ಪಾದಗಳು ಮನ್ಯಾಗ ಪ್ರವೇಶ ಮಾಡಿದಾಗಿನಿಂದ ನನ್ನ ಚಿಂತಿಗೊಳು ಒಂದೊಂದಾಗಿ ತಂತಾನ ದೂರ ಆಗ್ಲಿಕ್ಹತ್ತಾವ. ನಿನ್ನ ಮಹಿಮಾ ಅಪರಂಪಾರ ಅದಪಾ. ಆದರ ನಾ ಹಿಂಗ ಮಲಕೊಂಡಿರ್ತೇನಿ. ನೀ ನಿಂತ ಮಾತಾಡ್ತಿ. ಸಮಾ ಅನಸೂದಿಲ್ಲಾ. ಕೂಡಪಾ ಶಿವಪ್ಪಾ, ಕುರ್ಚಿ ತಗೋ, ಕೂಡು" ಎಂದಳು. ಇದು ಮೂರನೇ ಬಾರಿಯಲ್ಲವೆ? ತನ್ನ ಆರಾಧ್ಯ ದೈವದೊಡನೆ ತುಸು ಸಲಿಗೆಯಿಂದ ವರ್ತಿಸುತ್ತಿದ್ದಳು. "ಪರವಾಗಿಲ್ಲ ಭಕ್ತೆ" ಎಂದೆ. ಏಕೆಂದರೆ ಹತ್ತಿರ ಹೋದರೆ ನನ್ನ ಮೇಕಪ್ಪಿನ ಲೋಪದೋಷಗಳನ್ನು ಅವ್ವ ಕಂಡುಹಿಡಿಯಬಹುದು ಎಂಬ ಹೆದರಿಕೆ. "ಉರಗ ಭೂಷಣ ನೀನು. ಸರ್ಪ ಬಿಟ್ಟ ಬಂದ ಬಿಟ್ಟೀಯಲಾ..." ಎಂದು ಕೇಳಿದಳು. 'ಒಳ್ಳೇ ಪತ್ತೇದಾರಿ ಕೆಲಸ ಮಾಡುವವಳಂತೆ ಪ್ರಶ್ನೆ ಕೇಳುತ್ತಿದ್ದಾಳಲ್ಲ. ದೇವರಿಗೆ ತನಗೆ ಬೇಕಾದ ಹಾಗೆ ಬರಲು ಸ್ವಾತಂತ್ರ್ಯವಿಲ್ಲವೆ?' ಎಂದುಕೊಂಡೆ. ಆದರೂ ಸಾವರಿಸಿಕೊಂಡು "ಅದನ್ನು ನೋಡಿದರೆ ನಿನಗೆ ಭಯವಾಗುತ್ತದೆ ಭಕ್ತೆ. ಅದಕ್ಕೆ ಕೈಲಾಸದಲ್ಲೇ ಬಿಟ್ಟು ಬಂದೆ" ಎಂದು ತಡವರಿಸುತ್ತ ಹೇಳಿದೆ. ಈ ಬಾರಿ ತನ್ನ ಬಗ್ಗೆ ಕೇಳುವದೂ, ಅಳುವದೂ ಸರ್ವಥಾ ಇರಲಿಲ್ಲ. "ಭಕ್ತೆ, ಮುಪ್ಪಿನ ಸಮಯ. ನಿನ್ನ ಮಗ ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾನೆ. ಅವನ ಮಾತನ್ನು ಒಪ್ಪು. ಅವನು ಹೇಳಿದಂತೆ ಕೇಳಿ ಹಾಯಾಗಿರು..." ಎಂದೆ. ಈ ಸಂಭಾಷಣೆಗಳನ್ನೆಲ್ಲಾ ಮೊದಲೇ ಸಿದ್ಧಪಡಿಸಿಟ್ಟುಕೊಂಡಿದ್ದೆ. ಉಳಿದವನ್ನು ಹೇಗೋ ನಿಭಾಯಿಸುತ್ತಿದ್ದೆ.

ಅವ್ವ ದಿಂಬಿನ ಕೆಳಗಿದ್ದ ಕಾಗದಪತ್ರವನ್ನು ಎಡಗೈಯಿಂದ ತೆಗೆದು "ನೀ ಈಶ್ವರಾಗಿ ಅಲ್ಲ, ಮಗಾ ಅರುಣಾಗಿ ಈ ಪತ್ರಕ್ಕ ಸಹಿ ಮಾಡಂದ್ರೂ ಮಾಡತಿದ್ದೆ. ಇಷ್ಟೆಲ್ಲಾ ವೇಷಾ ಹಾಕ್ಕೊಂಡು ನಾಟಕಾ ಮಾಡೋ ಕಾರಣಾನ ಇರ್ಲಿಲ್ಲ" ಎಂದು ಮೆಲ್ಲನೆ ನಕ್ಕಳು. 'ಅಯ್ಯೋ! ಇಕಿಗೆ ಗೊತ್ತಾಗೇ ಹೋತ... ಈಗೇನ್ಮಾಡ್ಲಿ? ಇನ್ನ ನಾಟಕಾ ಮಾಡಿ ಉಪಯೋಗಿಲ್ಲ...' ಎಂದುಕೊಂಡವನೇ ಅವಳ ಹತ್ತಿರ ಹಾರಿ ನಿಂತು "ಅವ್ವಾ" ಎಂದೆ. ನಾಟಕವಾಡಿದ್ದಕ್ಕಾಗಿ ದುಃಖ, ಅವಳಿಗೆ ಗೊತ್ತಾಗಿದ್ದಕ್ಕಾಗಿ ನಾಚಿಕೆ ಮುಖದ ಮೇಲೆ ಒಮ್ಮೆಲೆ ವ್ಯಕ್ತವಾದವು. ಎಲ್ಲ ಮೀರಿ ಪ್ರೀತಿ ಹಣತೆ ಉರಿಯಿತು. ಜೀವ ಕೊಟ್ಟ ಜ್ಯೋತಿ ಅವಳು. ಅವಳ ಮುಂದೇಕೆ ನಾಚಿಕೆ? ಬಚ್ಚಿಡಲು ಇನ್ನೇನೂ ಉಳಿದಿರಲಿಲ್ಲ. ಎಲ್ಲ ಬಯಲಾಗಿತ್ತು. ಅವಳ ಕೈ ಮೇಲೆ ತಲೆ ಇಟ್ಟು ಒಮ್ಮೆ ಅತ್ತು ನಕ್ಕೆ.

"ನಿನಗ್ಹ್ಯಾಂಗ ಗೊತ್ತಾತವಾ?" ಎಂದು ಅಚ್ಚರಿಯಿಂದ ಕೇಳಿದೆ. ಅವಳು "ನಿಮ್ಮವ್ವ ನಾನು..." ಎಂದದ್ದೇ "ಮೊದಲನೇ ದಿವಸ ನೀ ಬಂದಾಗ ಭಾಳ ಖುಷಿ ಆತು. 'ದೇವರು ಥೇಟ್ ನನ ಮಗನ ಗತೇನ ಇದ್ದಾನಲ್ಲಾ' ಅನಿಸ್ತು. ನನಗ ಈ ಭವ ಬಂಧನದಿಂದ ಮುಕ್ತಿ ಸಿಗ್ತದ ಅನಕೊಂಡೆ. ಆದ್ರ ಅದಾಗಲಿಲ್ಲ. ಫೋನ್ ಬಂದ ಕೂಡ್ಲೆ ನೀ ಎಷ್ಟ ಘಾಬರ್ಯಾದಿ? ದೇವರು ಯಾಕ ಹೆದರತಾನ ಅನಿಸ್ತು. ನಾ ಹೇಳಿದ ದಿನಾನ ನೀ ಸಹನಾನ್ನ ಕರಕೊಂಡ ಬಂದ ಕೂಡ್ಲೆ ಗೊತ್ತಾತು ನೀನ ಅಂತ. ಆಮ್ಯಾಲೆ ಎರಡನೇ ಸಲಾ ಒಂದ ಕೈ ಹಿಂದ ಬಣ್ಣಾನ ಹಚ್ಚಿದ್ದಿಲ್ಲ. ಇವತ್ತೂ ನೋಡು, ಒಂದ ಕಿವಿಗೆ ಬಣ್ಣನ ಇಲ್ಲಾ. ಮತ್ತ... ಸರ್ಪದ ಬಗ್ಗೆ ಕೇಳಿದ ಕೂಡ್ಲೆ 'ನಿನಗೆ ಭಯ' ಅಂದಿ. ಆಗ ಖಾತ್ರಿ ಆತು. ಭಯ ನನಗಲ್ಲೋ, ನಿನಗ. ಸಣ್ಣಾಂವಿದ್ದಾಗಿಂದ ನೀ ಹಾವಿನ